ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 21-02-2017

## ಪತ್ರಿಕಾ ಆಮಂತ್ರಣ

1. ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ "ಅತ್ಯಾಧುನಿಕ ಲಸಿಕಾ ತಯಾರಿಕಾ ಪ್ರಯೋಗಾಲಯ ಕಟ್ಟಡ"ದ ಶಂಕುಸ್ಥಾಪನಾ ಸಮಾರಂಭ:

ಶಂಕುಸ್ಥಾಪನೆ:

ಎ. ಮಂಜು,

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ಘನ ಉಪಸ್ಥಿತಿ:

ಡಿ.ವಿ. ಸದಾನಂದಗೌಡ,

ಕೇಂದ್ರ ಅಂಕಿ-ಅಂಶ ಹಾಗೂ ಯೋಜನಾ ಅನುಷ್ಠಾನ ಸಚಿವರು

ಮುಖ್ಯ ಅತಿಥಿಗಳು:

ಶ್ರೀ ಎಸ್.ಆರ್. ಉಮಾಶಂಕರ

ಪ್ರಧಾನ ಕಾರ್ಯದರ್ಶಿಗಳು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ದಿನಾಂಕ: 22-02-2017 ಬುಧವಾರ, ಬೆಳಿಗ್ಗೆ 9-30 ಗಂಟೆಗೆ

ಸ್ಥಳ: ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಕನ್ನಡ ಸಭಾಂಗಣ, ಹೈನು ಮಹಾವಿದ್ಯಾಲಯ ಆವರಣ, ಹೆಬ್ಬಾಳ, ಬೆಂಗಳೂರು

2. ಪತ್ರಿಕಾಗೋಷ್ಠಿ:

ಕೃಷ್ಣಭೈರೇಗೌಡ,

ಕೃಷಿ ಸಚಿವರು,

ದಿನಾಂಕ: 22-2-2017 ಬುಧವಾರ, ಮಧ್ಯಾಹ್ನ 1-15 ಗಂಟೆಗೆ

ಸ್ಥಳ: ಕೊಠಡಿ ಸಂಖ್ಯೆ 224, ಎರಡನೇ ಮಹಡಿ, ವಿಕಾಸ ಸೌಧ, ಬೆಂಗಳೂರು

3. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ವತಿಯಿಂದ ವಿಶ್ವ ಚಿಂತನಾ ಮತ್ತು ಭಾತೃತ್ವ ದಿನಾಚರಣೆ ಸಮಾರೋಪ ಸಮಾರಂಭ:

ಮುಖ್ಯ ಅತಿಥಿ:

ಡಾ: ಪಿ.ಸಿ. ಜಾಫರ್,
ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ

ದಿನಾಂಕ: 22-2-2017 ಬುಧವಾರ ಮಧ್ಯಾಹ್ನ 2-00 ಗಂಟೆಗೆ
ಸ್ಥಳ: ಶಾಂತಿಗೃಹ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ,
(ಮಹಾರಾಣಿ ವಿಜ್ಞಾನ ಕಾಲೇಜ್ ಹತ್ತಿರ) ನಂ. 39, ಅರಮನೆ ರಸ್ತೆ, ಬೆಂಗಳೂರು -01

**ಪತ್ರಕರ್ತರಿಗೆ ವಿಶೇಷ ಆಮಂತ್ರಣ**

ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ವತಿಯಿಂದ "ಮಾಧ್ಯಮಗಳಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ಬಿತ್ತರಿಸುತ್ತಿರುವ ವಿಧಿ ವಿಧಾನಗಳ" ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಳಾಡಳಿತ ಇಲಾಖೆ, ಕಾನೂನು ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗಳ ಮುಖ್ಯಸ್ಥರು ಮತ್ತು ಕಾರ್ಯದರ್ಶಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಇವರುಗಳೊಂದಿಗೆ ದಿನಾಂಕ: 22-02-2017 ರ ಬುಧವಾರ ಬೆಳಿಗ್ಗೆ 11-00 ಗಂಟೆಗೆ, ಸ್ಥಳ: ಕೊಠಡಿ ಸಂಖ್ಯೆ 318, ಮೂರನೇ ಮಹಡಿ, ವಿಕಾಸ ಸೌಧ, ಬೆಂಗಳೂರು ಇಲ್ಲಿ ಚರ್ಚೆ ನಡೆಯಲಿದೆ. ಪತ್ರಕರ್ತರು ಈ ಸಭೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಲು ಕೋರಿದೆ.

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## 2020 ರ ವೇಳೆಗೆ ಶೇ. 50 ರಷ್ಟು ಅಪಘಾತ ಕಡಿಮೆ ಮಾಡುವ ಗುರಿ – ಸಾರಿಗೆ ಸಚಿವರ ಹೇಳಿಕೆ

**ಬೆಂಗಳೂರು, ಫೆಬ್ರವರಿ 21, (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಪ್ರತಿ ವರ್ಷ 1.5 ಲಕ್ಷ ಜನ ಅಪಘಾತದಲ್ಲಿ ಮರಣ ಹೊಂದುತ್ತಿದ್ದು, ಎಷ್ಟೋ ಜನ ಕೈ ಕಾಲು ಮುರಿದುಕೊಳ್ಳುತ್ತಿದ್ದಾರೆ. ಇದರ ಪ್ರಮಾಣವನ್ನು 2020 ರ ವೇಳೆಗೆ ಶೇ. 50 ರಷ್ಟು ಕಡಿಮೆ ಮಾಡುವ ಗುರಿ ಹೊಂದಲಾಗಿದೆ ಎಂದು ಸಾರಿಗೆ ಸಚಿವರ ರಾಮಲಿಂಗಾರೆಡ್ಡಿ ಅವರು ತಿಳಿಸಿದರು. ಅವರು ಇಂದು ಚಿತ್ರಕಲಾಪರಿಷತ್ತಿನಲ್ಲಿ ಸಾರಿಗೆ ಇಲಾಖೆ 28ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಏರ್ಪಡಿಸಿದ್ದ **"ವ್ಯಂಗ್ಯ ಚಿತ್ರ ಪ್ರದರ್ಶನ"** ವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಜ್ಯದಲ್ಲಿ ಅಪಘಾತದ ಬಗ್ಗೆ ಅರಿವು ಮೂಡಿಸಲು ಪ್ರತಿ ವರ್ಷ ಸಪ್ತಾಹ ಆಚರಿಸಲಾಗುತ್ತದೆ. ವಿಶೇಷವಾಗಿ ಮಕ್ಕಳಿಗೆ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ಹಾಗೂ ಪೋಲೀಸರು, ಸಾರಿಗೆ ಇಲಾಖೆಯ ಬಸ್ ಚಾಲಕರು, ನಿರ್ವಾಹಕರು ಗಳಿಗೆ ಅಪಘಾತ ಹಾಗೂ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ರಾಜ್ಯದ ಎಲ್ಲಾ ಭಾಗಗಳ ಸಾರಿಗೆ ಇಲಾಖೆಯ ಬಸ್ ಚಾಲಕರಿಗೆ ಐ ಕ್ಯಾಂಪ್ ಗಳ ಮೂಲಕ ಕಣ್ಣು ಪರೀಕ್ಷೆ ನಡೆಸಲಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ವ್ಯಂಗ್ಯ ಚಿತ್ರ ಪ್ರದರ್ಶನದ ಬಗ್ಗೆ ಕರಪತ್ರ ಬಿಡುಗಡೆ ಮಾಡಿ, ವ್ಯಂಗ್ಯ ಚಿತ್ರ ಪ್ರದರ್ಶನದಲ್ಲಿ ಬಹುಮಾನ ಗಳಿಸಿದ್ದ ಕಲಾವಿದರಿಗೆ ಬಹುಮಾನ ವಿತರಣೆ ಮಾಡಿದರು.

ಇತ್ತೀಚೆಗೆ ಕೆ.ಎಸ್.ಆರ್.ಟಿ.ಸಿ ಬಸ್ ಸುಟ್ಟಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು ಸಾವಿಗೀಡಾದವರಿಗೆ ತಕ್ಷಣಕ್ಕೆ 1.00 ಲಕ್ಷ ರೂ. ಪರಿಹಾರ ನೀಡಲಾಗಿದೆ. ವಿಮೆ ಕೂಡ ಇರುತ್ತದೆ. ಆದರೆ ಏನೇ ಪರಿಹಾರ ನೀಡಿದರು ಸಾವಾಗಿರುವ ಕುಟುಂಬಗಳಿಗೆ ಅನ್ಯಾಯವಾಗಿದೆ ಎಂದ ಅವರು ಬಸ್ಸಿನಲ್ಲಿ ಯಾವುದೇ ತಾಂತ್ರಿಕ ದೋಷವಿರಲಿಲ್ಲ. ಚಾಲಕರದ್ದು ಯಾವುದೇ ತಪ್ಪಿಲ್ಲ. ಅಕಸ್ಮಿಕವಾಗಿ ಘಟನೆ ಬಗ್ಗೆ ಅಧಿಕಾರಿಗಳು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದರು.

ಪ್ರದರ್ಶನದಲ್ಲಿ ವಿಶೇಷ ಆಹ್ವಾನಿತರಾಗಿದ್ದ ಚಿತ್ರ ನಟಿ ಕು: ಹರ್ಷಿಕಾ ಪೂಣಚ್ಚ ಅವರು ಮಾತನಾಡಿ ಇಂತಹಾ ಕಾರ್ಯಕ್ರಮಕ್ಕೆ ಬಂದಿರುವುದು ಖುಷಿ ತಂದಿದೆ. ಸಾವಿರ ಪದಗಳಲ್ಲಿ ಹೇಳಬಹುದಾದ ವಿಷಯಗಳನ್ನು ಒಂದೇ ಚಿತ್ರದ ಮೂಲಕ ಹೇಳಬಹುದು ಎಂದರು.

ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಡಾ. ಬಿ. ಬಸವರಾಜು, ಚಿತ್ರಕಲಾ ಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಕಮಲಾಕ್ಷಿ ಇನ್ನಿತರ ಅಧಿಕಾರಿಗಳು ಭಾಗವಹಿಸಿದ್ದರು.

ಇಂದಿರಾ

## ಕನ್ನಡ ಭಾಷೆ ಬೆಳೆಸುವ ಮನೋಭಾವ ಅಧಿಕಾರಿಗಳಿಗೆ ಬರಬೇಕು – ಉಮಾಶ್ರೀ

**ಬೆಂಗಳೂರು, ಫೆಬ್ರವರಿ 21, (ಕರ್ನಾಟಕ ವಾರ್ತೆ)**

**ಕನ್ನಡ ಭಾಷೆಯನ್ನು ಬೆಳೆಸಿ ಉಳಿಸುವಂತಹ ಮನೋಭಾವ ಅಧಿಕಾರಿಗಳಲ್ಲಿ ಬರಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ತಿಳಿಸಿದರು.**

**ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಕಾಸ ಸೌಧದಲ್ಲಿ ಇಂದು ಏರ್ಪಡಿಸಿದ್ದ ಕನ್ನಡ ಜಾಗೃತಿ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಒಂದು ದಿನದ "ಅಭಿಶಿಕ್ಷಣ" ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು ಕನ್ನಡ ಭಾಷೆಯೂ ಸೇರಿದಂತೆ ಎಲ್ಲಾ ಪ್ರಾದೇಶಿಕ ಭಾಷೆಗಳನ್ನು ಬೆಳೆಸುವಂತಹ ಕೆಲಸವನ್ನು ಅಧಿಕಾರಿಗಳು ಮಾಡಬೇಕು ಎಂದು ಅವರು ಮಾತನಾಡಿದರು.**

ಕೆಲವು ಅಧಿಕಾರಿಗಳು ಬಹು ದಿನಗಳಿಂದ ರಾಜ್ಯದಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದರೂ ಕನ್ನಡ ಭಾಷೆಯನ್ನು ಕಲಿಯುವಂತಹ ಪ್ರಯತ್ನ ಮಾಡಿಲ್ಲ ಎಂದು ವಿಷಾದ ವ್ಯಕ್ತಪಡಿಸಿದ ಸಚಿವೆ ಕನ್ನಡ ಭಾಷೆಯ ಬಗ್ಗೆ ಅಸಡ್ಡೆ ಹೊಂದಿರುವ ಹಾಗೂ ನಾಡು, ನುಡಿ  ಬೆಳವಣಿಗೆಗೆ ಸಹಕರಿಸದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದರು.

ಆಡಳಿತದಲ್ಲಿ ಕೆಳಹಂತದಿಂದಲೇ ಕನ್ನಡ ಭಾಷೆ ಅನುಷ್ಠಾನ ಹೆಚ್ಚಾಗಬೇಕು ಎಂದ ಸಚಿವರು ಮೇಲ್ಮಟ್ಟದ ಅಧಿಕಾರಿಗಳೂ ಕೆಳಹಂತದ ಅಧಿಕಾರಿಗಳು ಕನ್ನಡ ಅನುಷ್ಠಾನ ಯಾವ ರೀತಿ ಮಾಡುತ್ತಿದ್ದಾರೆ ಎಂದು ಗಮನಿಸಿ ಕನ್ನಡ ಭಾಷೆ ಬೆಳವಣಿಗೆಗೆ ಹೆಚ್ಚು ಆದ್ಯತೆ ನೀಡಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಆಡಳಿತದಲ್ಲಿ ಕನ್ನಡ ಭಾಷೆ ಅನುಷ್ಠಾನಗೊಳಿಸುವುದರ ಜೊತೆಗೆ ಕನ್ನಡ ಭಾಷೆಯನ್ನು ಬಳಸುವುದರ ಜೊತೆಗೆ ಭಾಷೆಯನ್ನು ಬೆಳೆಸೋಣ ಎಂದು  ನುಡಿದರು.  ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಕಳೆದ ಹತ್ತು ವರ್ಷಗಳಿಗೆ ಹೋಲಿಸಿದಲ್ಲಿ ಕನ್ನಡ ಪ್ರಗತಿ ಈಗ ಕಡಿಮೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯದಲ್ಲಿರುವ ಜನಸಾಮಾನ್ಯರು ವಿವಿಧ ಕ್ಷೇತ್ರಗಳ ತಜ್ಞರು  ಭಾಷೆ ಬೆಳವಣಿಗೆ ಬಗ್ಗೆ ಹೆಚ್ಚು ಜಾಗೃತಿ ವಹಿಸಬೇಕು ಎಂದ ಅಧ್ಯಕ್ಷರು ಕನ್ನಡ ಜಾಗೃತಿ ಸಮಿತಿಯ ಅಧಿಕಾರೇತರ ಸದಸ್ಯರು ಭಾಷೆ ಬೆಳವಣಿಗೆ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಆಂಗ್ಲರ ಆಡಳಿತದಲ್ಲಿ ಕನ್ನಡ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹೊರತಂದಿರುವ ಕನ್ನಡಪರ ಆಜ್ಞೆಗಳು- ಆದೇಶಗಳು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.  ಹಿರಿಯ ಸಾಹಿತಿಗಳಾದ  ಪ್ರೊ. ಚಂದ್ರಶೇಖರ ಪಾಟೀಲ, ಪ್ರೊ. ಕೆ. ಮರಳಸಿದ್ದಪ್ಪ, ಶ್ರೀಮತಿ ಪಾರ್ವತಮ್ಮ ಮಹದೇವ ಬಣಕಾರ, ರಾ.ನಂ. ಚಂದ್ರಶೇಖರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ: ಕೆ. ಮುರಳೀಧರ್ ಸೇರಿದಂತೆ ಕನ್ನಡ ಜಾಗೃತಿ ಸಮಿತಿಯ ಅಧಿಕಾರೇತರ ಸದಸ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕೆಪಿಪಿ/ಕೆಎಂ

## ರೈತರ ಆದಾಯ ದ್ವಿಗುಣಗೊಳಿಸುವ ಗುರಿಗೆ ಸರ್ಕಾರದ ಸಹಕಾರ

**ಬೆಂಗಳೂರು, ಫೆಬ್ರವರಿ 21, (ಕರ್ನಾಟಕ ವಾರ್ತೆ)**

ರೈತರ ಆದಾಯವನ್ನು ದ್ವಿಗುಣಗೊಳಿಸುವ ಗುರಿಗೆ ರಾಜ್ಯ ಸರ್ಕಾರದಿಂದ ಎಲ್ಲ ರೀತಿಯ ಸಹಕಾರವನ್ನು ನೀಡಲಾಗುವುದೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್ ಚಂದ್ರ ಕುಂಠಿಆ ಅವರು ಭರವಸೆ ನೀಡಿದರು.

ಇಂದು ನಬಾರ್ಡ್ ಕಛೇರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ರಾಜ್ಯಮಟ್ಟದ ಸಾಲ ಗೋಷ್ಠಿಯಲ್ಲಿ 2017-18 ನೇ ಸಾಲಿನ ರಾಜ್ಯ ಸಂಕೇಂದ್ರಿತ ಪತ್ರವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ರೈತರ ಆದಾಯವನ್ನು 2022 ರ ವೇಳೆಗೆ ದ್ವಿಗುಣಗೊಳಿಸಲು ಭಾರತ ಸರ್ಕಾರವು ಗುರಿಯನ್ನು

ನೀಡಿದೆ. ಈ ಗುರಿಯನ್ನು ಸಾಧಿಸಲು ರಾಜ್ಯ ಸರ್ಕಾರದ ವತಿಯಿಂದ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ನಬಾರ್ಡ್ ಕೂಡ ಈ ನಿಟ್ಟಿನಲ್ಲಿ ಸಾಲ ಯೋಜನೆಯನ್ನು ಉತ್ತಮವಾಗಿ ಅನುಷ್ಠಾನಗೊಳಿಸುತ್ತಿದೆ ಎಂದರು.

2015-16 ನೇ ಸಾಲಿನಲ್ಲಿ ರಾಜ್ಯದಲ್ಲಿ ಬರ ಪರಿಸ್ಥಿತಿ ಇದ್ದ ಕಾರಣ ಕೃಷಿ ಆದಾಯವು ಗಣನೀಯವಾಗಿ ಕಡಿಮೆಯಾಗಿದೆ. ಹವಾಮಾನ ವೈಪರೀತ್ಯದಿಂದಲೂ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಕೆಲವು ಜಿಲ್ಲೆಗಳಲ್ಲಿ ಸರ್ಕಾರದಿಂದ ಹವಾಮಾನ ವೈಪರೀತ್ಯ ತಡೆಗೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಅದು ಯಶಸ್ವಿಯಾದರೆ, ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುವುದೆಂದು ಅವರು ತಿಳಿಸಿದರು.

ರೈತರಿಗೆ ಬೆಳೆ ವಿಮೆ, ಆಧುನಿಕ ತಂತ್ರಜ್ಞಾನಗಳ ಬಳಕೆ ಕುರಿತಂತೆ ಮಾಹಿತಿ ಮತ್ತು ಜ್ಞಾನವನ್ನು ನೀಡಬೇಕಾಗಿದ್ದು, ಪ್ರಗತಿಪರ ರೈತರು ಮತ್ತು ರೈತರುಗಳ ನಡುವೆ ಸಂವಾದಗಳನ್ನು ಏರ್ಪಡಿಸುವುದು ಅವಶ್ಯಕವೆಂದರು.

2017-18 ನೇ ಸಾಲಿನ ರಾಜ್ಯ ಸಂಕೇಂದ್ರಿತ ಪತ್ರವನ್ನು ಮಂಡಿಸಿ ಮಾತನಾಡಿದ(ನಬಾರ್ಡ್ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ) ಎಂ.ಐ. ಗಾಣಗಿ ಅವರು ಅವರು 2014-15 ರಲ್ಲಿ ಕೃಷಿ ಮತ್ತು ಸಂಬಂಧಿತ ವಲಯದಲ್ಲಿ ಶೇಕಡ 1.6 ರಷ್ಟು ವೃದ್ಧಿ ಕಂಡಿದ್ದರೆ, 2015-16 ರಲ್ಲಿ ಶೇಕಡ 4.7 ರಷ್ಟು ಕುಂಠಿತವಾಗಿದೆ. ಆದ್ದರಿಂದ ಕೃಷಿ ವೃದ್ಧಿ ದರವನ್ನು ಹೆಚ್ಚಿಸುವ ಸಲುವಾಗಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಆಹಾರ ಸಂಸ್ಕರಣೆ, ಕೃಷಿ ಉತ್ಪನ್ನ ಮಾರುಕಟ್ಟೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

2017-18 ನೇ ಸಾಲ ಯೋಜನೆಯ ಕೃಷಿ ಹಾಗೂ ಗ್ರಾಮೀಣ ಕ್ಷೇತ್ರಗಳ ಪುನಶ್ಚೇತನ ಪ್ರಕ್ರಿಯೆಗೆ ರೂ. 1,79,160 ಕೋಟಿ ನಿಗದಿಪಡಿಸಲಾಗಿದ್ದು 2016-17 ರ ಸಾಲಿನ ಅಂದಾಜಿಗಿಂತ ಶೇ. 23.82 ರಷ್ಟು ಹೆಚ್ಚಿದೆ. ಆದರೆ ಕೃಷಿ ಕ್ಷೇತ್ರಕ್ಕೆ ಒಟ್ಟು ಅಂದಾಜಿನ ಶೇಕಡ 57 ರಷ್ಟು ಅಂದರೆ ರೂ. 1,02,367 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ರಿಜರ್ವ್‌ಬ್ಯಾಂಕ್‌ನ ಪ್ರಾದೇಶಿಕ ನಿರ್ದೇಶಕರಾದ ಯುಗಿನಿ ಇ. ಕರ್ತಕ್, ಸಿಂಡಿಕೇಟ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಅರುಣ್ ಶ್ರೀವಾಸ್ತವ್ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪೂರ್ಣಿಮ/ಕೆಎಂ

## ಹವಾಮಾನ ಚತುರ ಕೃಷಿ ಕುರಿತ ಕೃಷಿ ವಿಜ್ಞಾನ ಕಾಂಗ್ರೆಸ್ -2017 ಉದ್ಘಾಟನೆ

ಬೆಂಗಳೂರು, ಫೆಬ್ರವರಿ 21, (ಕರ್ನಾಟಕ ವಾರ್ತೆ)

ವಾತಾವರಣದಲ್ಲಿ ಹೆಚ್ಚುತ್ತಿರುವ ಇಂಗಾಲದಿಂದ ಜಾಗತಿಕ ತಾಪಮಾನ ಹೆಚ್ಚುವುದರ ಜೊತೆಗೆ ಮಳೆ ಪ್ರಮಾಣವು ಸಹ ಕಡಿಮೆಯಾಗುತ್ತಿದೆ ಎಂದು ರಾಜ್ಯಪಾಲ ವಜುಭಾಯಿ ವಾಲಾ ಆತಂಕ ವ್ಯಕ್ತಪಡಿಸಿದರು.

ಇಂದು ನಗರದ ಜಿಕೆವಿಕೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಭಾರತೀಯ ಕೃಷಿ ಅನುಸಂದಾನ ಪರಿಷತ್ ಹಾಗೂ ರಾಷ್ಟ್ರೀಯ ಕೃಷಿ ವಿಜ್ಞಾನ ಅಕಾಡೆಮಿಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಹವಾಮಾನ  ಚತುರ ಕೃಷಿ ಕುರಿತ ಕೃಷಿ ವಿಜ್ಞಾನ ಕಾಂಗ್ರೆಸ್ –2017 ನಾಲ್ಕು ದಿನಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ತಾಪಮಾನ ಹೆಚ್ಚಳದಿಂದ ಬೆಳೆಗಳ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.  ಭಾರತದಂತ ದೊಡ್ಡ ಜನಸಂಖ್ಯೆಯ ರಾಷ್ಟ್ರದಲ್ಲಿ ಹವಾಮಾನ ವೈಪರೀತ್ಯದಿಂದ ಬರಗಾಲ ಉಂಟಾಗಿ ಆಹಾರ ಕೊರತೆಯು ಉಂಟಾಗುವ ಸಾಧ್ಯತೆಯಿದೆ.  ಆದ್ದರಿಂದ ವಿಜ್ಞಾನಿಗಳು ಹೊಸ ತಂತ್ರಜ್ಞಾನದಿಂದ ಹೆಚ್ಚು ಬೆಳೆಗಳನ್ನು ಬೆಳೆಯಲು ಸಂಶೋಧನೆ ನಡೆಸಬೇಕು.  ಇಸ್ರೇಲ್‌ನಂತಹ ರಾಷ್ಟ್ರದಲ್ಲಿ ಅತಿ ಕಡಿಮೆ ಮಳೆಯಲ್ಲಿ ಹೆಚ್ಚು ಬೆಳೆಯನ್ನು ಬೆಳೆಯಲು ತಂತ್ರಜ್ಞಾನ ಕಂಡುಕೊಂಡಿದ್ದಾರೆ.   ಭಾರತದಲ್ಲಿ ಹೆಚ್ಚು ಮಾನವ ಸಂಪನ್ಮೂಲ ಲಭ್ಯವಿದ್ದರೂ ಅವಕಾಶಗಳ ಕೊರತೆಯಿದೆ.  ಇಲ್ಲಿನ  ಮಹಿಳೆಯರು ಸಹ ಬುದ್ಧಿವಂತರಾಗಿದ್ದು, ಅವಕಾಶ ವಂಚಿತರಾಗಿದ್ದಾರೆ.  ಇಲ್ಲಿ ಹಮ್ಮಿಕೊಂಡಿರುವ ಈ ಕೃಷಿ ಸಮಾವೇಶ ರೈತರಿಗೆ ಆಧುನಿಕ ರೀತಿಯಲ್ಲಿ ಬೆಳೆ ಬೆಳೆಯುವ ಪ್ರೇರಣೆಯಾಗಲಿ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕೃಷಿ ಸಚಿವ ಕೃಷ್ಣಬೈರೇಗೌಡ, ಕರ್ನಾಟಕ ಸತತ ಬರಗಾಲವನ್ನು ಎದುರಿಸುತ್ತಿದೆ.  ಎರಡು ಮೂರು ಜಿಲ್ಲೆಗಳಲ್ಲಿ ಪ್ರಳಯವು ಬಂದೊದಗಿತ್ತು.  ಹವಾಮಾನ ವೈಪರೀತ್ಯದಿಂದ ಕೃಷಿ ಚಟುವಟಿಕೆಗಳಲಿಗೆ ಹಿನ್ನೆಡೆಯುಂಟಾಗಿದ್ದರೂ ಸಹ ರೈತರು ನೂತನ ಕೃಷಿ ವಿಧಾನಗಳನ್ನು ಅನುಸರಿಸುತ್ತಿದ್ದಾರೆ.  ಹವಾಮಾನ ಚತುರ ಕೃಷಿಯ ಬಗ್ಗೆ ಸಾಮಾಜಿಕ ಅರಿವು ಮೂಡಿಸುವುದರ ಜೊತೆಗೆ ವೈಜ್ಞಾನಿಕ ಲೇಪನವನ್ನು ನೀಡಬೇಕಿದೆ.  ಜೈವಿಕ ತಂತ್ರಜ್ಞಾನ, ಅಣುಥೆರಪಿ ಸೇರಿದಂತೆ ಹೊಸ ಆವಿಷ್ಕಾರಗಳು ಮಾನವನ  ಜೀವಿತಾವಧಿಯನ್ನು 120 ವರ್ಷಗಳಿಗೆ ಹೆಚ್ಚಿಸುವ ನಿಟ್ಟಿನಲ್ಲಿದೆ.  ನಾವು ನೈಸರ್ಗಿಕ ಸಂಪನ್ಮೂಲವಾದ ನೀರನ್ನು ಹೆಚ್ಚು ಬಳಸಿ ಅಪರಾಧ ಎಸಗುತ್ತಿದ್ದೇವೆ.  ನೀರನ್ನು ಕುಲುಷಿತಗೊಳಿಸದೆ ಸಂರಕ್ಷಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದರು.

ಕಾರ್ಯಕ್ರಮದಲ್ಲಿ  ನೀತಿ ಆಯೋಗದ ಸದಸ್ಯ ರಮೇಶ್ ಚಾಂದ್ ಮಾತನಾಡಿ ಆಯಾ ಪ್ರಾಂತ್ಯಕ್ಕೆ ಅನುಗುಣವಾಗಿ ರೈತರು ತಮ್ಮ ಬೆಳೆಗಳ ಮಾರ್ಪಾಡಿ ಮಾಡಿಕೊಳ್ಳುವ ಅಗತ್ಯವಿದೆ.  ತಾಪಮಾನ ಹೆಚ್ಚಳದಿಂದ ಕೇವಲ ಬೆಳೆಗಳಷ್ಟೇ ಅಲ್ಲದೆ ಮಾನವ, ಪ್ರಾಣಿ ಪಕ್ಷಿ ಸಂಕುಲಕ್ಕೆ ಸಹ ತೊಂದರೆಯುಂಟಾಗುತ್ತದೆ. ವಾತಾವರಣವನ್ನು ಶುಭ್ರವಾಗಿಟ್ಟುಕೊಂಡು ನೈಸರ್ಗಿಕ ಸಂಪನ್ಮೂಲವನ್ನು ಉಳಿಸಬೇಕೆಂದರು.

ಕಾರ್ಯಕ್ರಮದಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾ ನಿರ್ದೇಶಕ ಡಾ: ಪಿ. ಮಹಾಪಾತ್ರ, ರಾಷ್ಟ್ರೀಯ ಕೃಷಿ ವಿಜ್ಞಾನಗಳ ಅಕಾಡೆಮಿ ನವದೆಹಲಿಯ ಅಧ್ಯಕ್ಷ ಡಾ: ಪಂಜಾಬ್‌ಸಿಂಗ್, ಹಿಂದಿನ ಅಧ್ಯಕ್ಷ ಡಾ: ಎಸ್. ಅಯ್ಯಪ್ಪನ್, ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ: ಎಚ್. ಶಿವಣ್ಣ ಹಾಗೂ ಇತರರು ಉಪಸ್ಥಿತರಿದ್ದರು.

ಈ ಸಮಾವೇಶವು ನಾಲ್ಕು ದಿನ ನಡೆಯಲಿದ್ದು ವಿವಿಧ ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳ ಪ್ರೊಫೆಸರ್‌ಗಳು, ಕುಲಪತಿಗಳು, ವಿಜ್ಞಾನಿಗಲು ಇದರಲ್ಲಿ ಪಾಲ್ಗೊಂಡಿದ್ದರು. ಅಲ್ಲದೆ ವಿಧ್ಯಾರ್ಥಿಗಳು, ಕೃಷಿಕರು ಸಹ ಕಾರ್ಯಕ್ರಮದ ಸದುಪಯೋಗ ಪಡೆದರು.

ಕಾರ್ಯಕ್ರಮದ ಅಂಗವಾಗಿ ಸುಮಾರು 100 ಕ್ಕೂ ಹೆಚ್ಚು ಮಳಿಗೆಗಳಲ್ಲಿ ಕೃಷಿ, ರೇಷ್ಮೆ ಹಾಗೂ ಹವಾಮಾನ ವೈಪರೀತ್ಯಕ್ಕೆ ಸಂಬಂಧಿಸಿದ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

ಕವನ/ಕೆಎಂ

## ಫೆಬ್ರವರಿ 22 ರಂದು ವಿಶ್ವ ಚಿಂತನಾ ಮತ್ತು ವಿಶ್ವ ಭಾತೃತ್ವ ದಿನಾಚರಣೆ

ಬೆಂಗಳೂರು, ಫೆಬ್ರವರಿ 21, (ಕರ್ನಾಟಕ ವಾರ್ತೆ)

ಫೆಬ್ರವರಿ 22 ರಂದು ವಿಶ್ವ ಚಿಂತನಾ ದಿನಾಚರಣೆ ಮತ್ತು ವಿಶ್ವ ಭಾತೃತ್ವ/ಭಗಿನಿತ್ವ ದಿನಾಚರಣೆಯನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ವತಿಯಿಂದ ಆಚರಿಸಲಾಗುತ್ತಿದೆ.

"ವಿಶ್ವ ಸ್ಕೌಟ್-ಗೈಡ್ ಕುಟುಂಬವನ್ನು" ವಿಶ್ವದ ಯುವ ಜನಾಂಗಕ್ಕೆ ಉಡುಗೊರೆಯಾಗಿ ನೀಡಿದವರು ಸ್ಕೌಟಿಂಗ್ ಸಂಸ್ಥಾಪಕರಾದ ಲಾರ್ಡ್ ಬೇಡೆನ್ ಪೊವೆಲ್ ಆಫ್ ಗಿಲ್‌ವೆಲ್ಲ್ ಮತ್ತು ಪತ್ನಿ ಆಲೇವ್ ಸೇಂಟ್ ಕ್ಲೇರ್ ಸೋಮ್ಸರವರು.

ಲಾರ್ಡ್ ಬೇಡೆನ್ ಪೊವೆಲ್ ಆಫ್ ಗಿಲ್‌ವೆಲ್ಲ್ ಹುಟ್ಟಿದ್ದು 1857 ಫೆಬ್ರವರಿ 22 ರಂದು, ಇವರ ಪತ್ನಿ ಆಲೇವ್ ಸೇಂಟ್ ಕ್ಲೇರ್ ಸೋಮ್ಸರವರು ಹುಟ್ಟಿದ್ದು 1889 ಫೆಬ್ರವರಿ 22 ರಂದು ಈ ದಂಪತಿಗಳಿಬ್ಬರ ಹುಟ್ಟಿದ ಹಬ್ಬವು ಒಂದೇ ದಿನವೆಂಬುದು ಅಪರೂಪದ ಸಂಗತಿ.

1926 ರಲ್ಲಿ ಯು.ಎಸ್.ಎ. ಯಲ್ಲಿ ನಡೆದ 6 ನೇ ಅಂತರಾಷ್ಟ್ರೀಯ ಗೈಡ್ ಸಮ್ಮೇಳನದಲ್ಲಿ ಆಲೇವ್ ಬಿ.ಪಿ. ಯವರ ಅವಿರತ ಸೇವೆಯನ್ನು ಗೌರವಿಸಿ ಅವರ ಹುಟ್ಟುಹಬ್ಬವಾದ ಫೆಬ್ರವರಿ 22 ನ್ನು "ಚಿಂತನಾ ದಿನಾಚರಣೆ" ಎಂದು ಆಚರಿಸಲು ನಿರ್ಧರಿಸಲಾಯಿತು. ಅವರ ಪತ್ನಿ ಹಾಗೂ ಸ್ಕೌಟ್ ಚಳುವಳಿಯ ಸಂಸ್ಥಾಪಕರಾದ ಲಾರ್ಡ್ ಬೆಡನ್ ಪಾವೆಲರ ಹುಟ್ಟು ಹಬ್ಬವು ಅಂದೇ ಆದ್ದರಿಂದ ಅವರ ಹುಟ್ಟು ಹಬ್ಬವನ್ನು ಸಂಸ್ಥಾಪಕರ ದಿನಾಚರಣೆ ಎಂದು ಆಚರಿಸಲು ನಿರ್ಧರಿಸಲಾಯಿತು. ಅವರ ಹುಟ್ಟು ಹಬ್ಬವನ್ನು ಮೊದಲಿಗೆ ಸಂಸ್ಥಾಪಕರ ದಿನಾಚರಣೆ ಎಂದು ನಂತರ ಭಾತೃತ್ವ ದಿನಾಚರಣೆ ಎಂದು ಆಚರಿಸಲಾಗುತ್ತಿದೆ.

ಡೆನ್ಮಾರ್ಕ್ ಗೈಡರ್ ಒಬ್ಬರು ಚಿಂತನಾ ದಿನಾಚರಣೆಯಂದು ನಿಧಿ ಸಂಗ್ರಹಿಸುವ ಸಲಹೆಯನ್ನು ಮತ್ತು **"One penny for one Thought"** "ಒಂದು ಚಿಂತನೆಗೆ ಒಂದು ನಾಣ್ಯ" ಎಂಬ ಸಲಹೆಯನ್ನು "ವ್ಯಾಗ್ಸ್" ಗೆ ನೀಡಿದರು.

1932 ರಲ್ಲಿ ಪೋಲ್ಯಾಂಡ್ ದೇಶದಲ್ಲಿ ನಡೆದ ಏಳನೇ ಅಂತರಾಷ್ಟ್ರೀಯ ಗೈಡ್ ಸಮ್ಮೇಳನದಲ್ಲಿ ಎಲ್ಲಾ ಸದಸ್ಯ ದೇಶಗಳಲ್ಲೂ ಚಿಂತನಾ ನಿಧಿ ಸಂಗ್ರಹಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ಈ ದಿನವನ್ನು ವಿಶ್ವದ ಎಲ್ಲಾ ಗೈಡ್‌ಗಳು ಸಂಭ್ರಮದಿಂದ ಆಚರಿಸುತ್ತಾರೆ. 1976 ರಲ್ಲಿ ಚಿಂತನಾ ದಿನಾಚರಣೆಯ ಲಾಂಛನವನ್ನು ಬಿಡುಗಡೆ ಮಾಡಲಾಯಿತು. ಈ ಲಾಂಛನದ ಮಧ್ಯದಲ್ಲಿ ವಿಶ್ವ ಗೈಡ್ ಲಾಂಛನವಿದ್ದು 8 ಬಾಣಗಳು ಇದನ್ನು ಸುತ್ತುವರೆದಿದೆ. ಈ ಬಾಣಗಳು ವಿಶ್ವದಲ್ಲಿರುವ ಎಲ್ಲಾ ಸದಸ್ಯ ರಾಷ್ಟ್ರಗಳೂ ಈ ಸಂಸ್ಥೆಗೆ ಸಹಾಯ ಹಸ್ತ ನೀಡಿ, ಇದರ ಅಸ್ತಿತ್ವವನ್ನು ಬಲಪಡಿಸುತ್ತದೆ ಎಂದು ಸಾರುತ್ತಿದೆ.

ಈ ದಿನದಂದು ಗರ್ಲ್ ಗೈಡ್ ಮತ್ತು ಗರ್ಲ್ ಸ್ಕೌಟ್ ಹೆಣ್ಣುಮಕ್ಕಳು ಒಬ್ಬರಿಗೊಬ್ಬರು ಸಂತಸದಿಂದ ವಂದನೆಯಿಂದ ಸಲ್ಲಿಸುತ್ತಾರೆ ಹಾಗೂ "ಒಂದು ಚಿಂತನೆಗೆ ಒಂದು ನಾಣ್ಯ" ನೀಡುವ ಮೂಲಕ ವಿಶ್ವ ಗರ್ಲ್ ಗೈಡ್ ಮತ್ತು ಗರ್ಲ್ ಸ್ಕೌಟ್ ಸಂಸ್ಥೆಗೆ ಆರ್ಥಿಕ ನೆರವು ನೀಡುತ್ತಾರೆ. ಈ ನಿಧಿಯನ್ನು ಗೈಡ್ಸ್ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು. ಚಳವಳಿಯ ಬಗ್ಗೆ ಚಿಂತನೆ ನಡೆಸುವುದರ ಜೊತೆಗೆ, ಸ್ಪರ್ಧೆ, ಸಾಂಸ್ಕೃತಿಕ ಚಟುವಟಿಕೆ ಸೇವಾ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡು ಆನಂದಿಸುತ್ತಾರೆ.

ಪ್ರತಿ ವರ್ಷವೂ ಈ ದಿನಚರಣೆಯನ್ನು ಸ್ಕೌಟ್ ಮತ್ತು ಗೈಡ್ ಸಂಸ್ಥೆ ಬೆಳವಣಿಗೆ ಮತ್ತು ಅಭಿವೃದ್ಧಿಯ ಚಿಂತನೆಗಾಗಿ ವಿಶ್ವ ಗರ್ಲ್ ಮತ್ತು ಗರ್ಲ್ ಸ್ಕೌಟ್ ಸಂಸ್ಥೆಯು ಒಂದು ವಿಷಯವನ್ನು ನೀಡುತ್ತದೆ. ಪ್ರಸಕ್ತ ಸಾಲಿನಲ್ಲಿ "ಬೆಳೆಸಿ" (ಗ್ರೋ) ಎಂಬ ವಿಷಯವನ್ನು ನೀಡಿದೆ. ವಿಶ್ವದ ಎಲ್ಲಾ ಗರ್ಲ್ ಸ್ಕೌಟ್ ಮತ್ತು ಗರ್ಲ್ ಗೈಡ್ಸ್‌ಗಳಿಗೆ ಈ ಕುರಿತು ಕಾರ್ಯೋನ್ಮುಖವಾಗುವ ಕರೆ ನೀಡಿದೆ. ಈ ವಿಚಾರದ ಪ್ರಕಾರ ಸ್ಕೌಟ್ ಮತ್ತು ಗೈಡ್‌ಗಳ ಸಂಖ್ಯೆ ಮತ್ತು ಗುಣಮಟ್ಟವನ್ನು ಬೆಳೆಸಬೇಕಾಗಿದೆ ತನ್ಮೂಲಕ ಚಳುವಳಿಯನ್ನು ಅಭಿವೃದ್ಧಿಗೊಳಿಸಬೇಕಾಗಿದೆ.

ಈ ಸಾಲಿನಲ್ಲಿ ರಾಜ್ಯ ಸಂಸ್ಥೆಯು 22 ಫೆಬ್ರವರಿ ರಂದು ಕಬ್ -ಬುಲ್‌ಬುಲ್, ಸ್ಕೌಟ್, ಗೈಡ್, ರೋವರ್ ರೇಂಜರ್‌ಗಳಿಗಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1) ಒಬ್ಬರು ಮತ್ತೊಬ್ಬರನ್ನು ಕರೆತನ್ನಿ:

ಒಬ್ಬ ಸ್ಕೌಟ್ -ಗೈಡ್ ಕಬ್-ಬುಲ್ ಬುಲ್, ಒಬ್ಬ ಸ್ನೇಹಿತ ಅಥವಾ ಕಾರ್ಯಕ್ರಮಕ್ಕೆ ಕರೆತರಬೇಕು. ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮೆಚ್ಚುಗೆಯಾದರೆ ಸದಸ್ಯತ್ವ ಪಡೆಯಬಹುದು. ಅಲೇವ್ ಲೇಡಿ ಬಿ ಪಿ ಅವರು 602 ವರ್ಷಗಳ ಹಿಂದೆ ಈ ಚಟುವಟಿಕೆಯನ್ನು ಸೂಚಿಸಿದ್ದರು. ಮಕ್ಕಳು, ದಳನಾಯಕಿಯರು, ತರಬೇತುದಾರರು ಹಿತೈಷಿಗಳು ಪ್ರತಿಯೊಬ್ಬರು ಒಬ್ಬರನ್ನು ಕರೆ ತಂದು ಚಳುವಳಿಯನ್ನು ಬೆಳೆಸಬೇಕೆಂದು ತಿಳಿಸಿದ್ದರು.

2) ಸಸ್ಯ ಸ್ನೇಹ ಪ್ರತಿಯೊಬ್ಬ ಮಕ್ಕಳಿಗೂ ಒಂದು ಕವರನ್ನು ಕೊಟ್ಟು ಒಂದು ಬೀಜವನ್ನು ನೆಡಿಸಿ, ನೀರನ್ನು ಸಿಂಪಡಿಸಿ ಪ್ರತಿಯೊಬ್ಬರಿಗೂ ನೀಡಲಾಗುವುದು ಇದನ್ನು ಬೆಳೆಸಿ ಕಾಲ ಕಾಲಕ್ಕೆ ವೀಕ್ಷಿಸಿ ಚಿತ್ರಗಳನ್ನು ಬರೆದು ವರದಿಯನ್ನು ಅವರವರ ದಳನಾಯಕ/ನಾಯಕಿಗೆ ಸಲ್ಲಿಸುವುದು.

3) ದೇಶ ಭಕ್ತಿ ಗೀತೆ ಹಾಡುವುದು. 4) ಚಿತ್ರ ಬಿಡಿಸಿ ಬಣ್ಣ ತುಂಬುವುದು 5) ವಿನೋದ ಆಟಗಳು

ಈ ಎಲ್ಲಾ ಚಟುವಟಿಕೆಗಳ ಮೂಲಕ ಗಣಾತ್ಮಕ ಮತ್ತು ಗುಣಾತ್ಮಕ ಬೆಳವಣಿಗೆಯನ್ನು ಮಾಡಲು ಪ್ರಯತ್ನಿಸಲಾಗುವುದು.

2010 ರಿಂದ 2012 ರವರೆಗೆ ನಡೆದ ಗೈಡ್ ಶತಮಾನೋತ್ಸವದಲ್ಲಿ ಕೊಟ್ಟಂತಹ ಸಂದೇಶ ಚಳುವಳಿಯನ್ನು ಬಿತ್ತಿ, ಬೆಳೆಸಿ, ಹಂಚಿ. ನಾವು ಮಾಡುವ ಈ ಎಲ್ಲಾ ಕಾರ್ಯಗಳ ಫಲವನ್ನು ಸಮುದಾಯ ಹಾಗೂ ಸಮಾಜಕ್ಕೆ ಹಂಚುವ ಉದ್ದೇಶ ಹೊಂದಿದ್ದಾರೆ.

ಬೆಳವಣಿಗೆ ಕುರಿತಾಗಿ ಒಂದು ಗೀತೆಯನ್ನು ನೀಡಲಾಗಿದೆ. ಇದನ್ನು ಎಲ್ಲರೂ ಹಾಡಬಹುದು.

**We are planting Scouting Guiding and growing the fruits**

**We are Sharing fruits in the community**

**The Boys and Girls world say**

**We can make a change it's a small world after all**

**WGGGS IS OUR SWEET HOME**

**HAPPY THINKING DAY**

**jadi/km**

# ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಲ್ಲಿ ಅತ್ಯಾಧುನಿಕ ಲಸಿಕೆ ತಯಾರಿಕಾ ಪ್ರಯೋಗಾಲಯ

ಬೆಂಗಳೂರು, ಫೆಬ್ರವರಿ 21, (ಕರ್ನಾಟಕ ವಾರ್ತೆ)

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಲ್ಲಿ ನೂತನ ಅತ್ಯಾಧುನಿಕ ಲಸಿಕೆ ತಯಾರಿಕಾ ಪ್ರಯೋಗಾಲಯ ಕಟ್ಟಡದ ಶಂಕು ಸ್ಥಾಪನೆಯನ್ನು –ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಎ. ಮಂಜು, ಫೆಬ್ರವರಿ 22 ರಂದು ಮಾಡಲಿದ್ದಾರೆ.

ನೂತನ ಅತ್ಯಾಧುನಿಕ ಲಸಿಕೆ ತಯಾರಿಕಾ ಪ್ರಯೋಗಾಲಯ

ಕುರಿಗಳನ್ನು ಬಾಧಿಸುವ ಕೆಲವು ಬಾಕ್ಟೀರಿಯಾ ಹಾಗೂ ವೈರಾಣು ರೋಗಗಳಿಂದ ರೈತರು ಬೃಹತ್ ಆರ್ಥಿಕ ನಷ್ಟಕ್ಕೆ ಗುರಿಯಾಗುತಿದ್ದು, ಕುರಿಗಳನ್ನು ಈ ರೋಗಗಳಿಂದ ರಕ್ಷಿಸುವುದು ತುಂಬಾ ಅಗತ್ಯವಾಗಿದೆ. ಕುರಿಗಳ ಆರೋಗ್ಯ ರಕ್ಷಣೆಗಾಗಿ ಉತ್ತಮ ಗುಣಮಟ್ಟದ ಜೀವರಕ್ಷಕ ಲಸಿಕೆಗಳ ಉತ್ಪಾದನೆ ಅತ್ಯವಶ್ಯವಾಗಿದ್ದು, ಲಸಿಕೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಯಾರಿಸಲು ಅಂತರಾಷ್ಟ್ರೀಯ ಮಟ್ಟದ ಅತ್ಯಾಧುನಿಕ ಸೌಲಭ್ಯ ನಿರ್ಮಾಣ ಮಾಡುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಈಗಾಗಲೇ ಈ ಸಂಸ್ಥೆಯು ಕುರಿಗಳಲ್ಲಿನ ನೀಲಿ

ನಾಲಿಗೆ ರೋಗ ಮತ್ತು ರೇಬಿಸ್ ರೋಗಗಳಿಗೆ ಲಸಿಕಾ ತಯಾರಿಕಾ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಆದರೆ ಈ ಲಸಿಕೆಗಳನ್ನು ಬೃಹತ್ ಮಟ್ಟದಲ್ಲಿ ತಯಾರಿಸಲು ಸೂಕ್ತ ಸೌಲಭ್ಯದ ಕೊರತೆಯಿದೆ.

ಪ್ರಾಣಿಜನ್ಯ ರೋಗಗಳಾದ ಬ್ರುಸೆಲ್ಲಾ ಮತ್ತು ರೇಬಿಸ್ ರೋಗಗಳಿಗೆ ಲಸಿಕೆ ತಯಾರಿಸಲು ಹಾಗೂ ತಯಾರಿಕಾ ಸಿಬ್ಬಂದಿ ಮತ್ತು ಪರಿಸರ ರಕ್ಷಣೆಯನ್ನು ಮಾಡಲು ಬಿ.ಎಸ್.ಎಲ್.–3 ಸೌಲಭ್ಯವುಳ್ಳ ಅಂತಾರಾಷ್ಟ್ರೀಯ ಮಟ್ಟದ ಅತ್ಯಾಧುನಿಕ ಕುರಿ ಲಸಿಕಾ ತಯಾರಿಕಾ ಘಟಕವನ್ನು ನಿರ್ಮಾಣ ಮಾಡುವುದು ಅಗತ್ಯವಾಗಿದೆ. ಹಾಗಾಗಿ, "ಜಾನುವಾರು ಆರೋಗ್ಯ ರಕ್ಷಣೆ ಯೋಜನೆ" ಎಂಬ ಯೋಜನೆಮಾಡಿ ಈಗಾಗಲೇ ಕುರಿ ಮತ್ತು ಪ್ರಾಣಿಜನ್ಯ ರೋಗಗಳ ಅತ್ಯಾಧುನಿಕ ಲಸಿಕೆ ಉತ್ಪಾದನೆ ಸೌಲಭ್ಯ ಸ್ಥಾಪನೆಗೆ ರಾಜ್ಯ ಸರ್ಕಾರ ಮಂಜೂರಾತಿ ನೀಡಿದೆ. ಈ ಲಸಿಕಾ ಉತ್ಪಾದನೆ ಸೌಲಭ್ಯವನ್ನು ಅಂತಾರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ನಿರ್ಮಾಣ ಮಾಡಲಾಗುತ್ತದೆ. ಪ್ರಾಸ್ತಾವಿಕ ಸೌಲಭ್ಯವು ಬ್ಯಾಕ್ಟೀರಿಯಾ ಹಾಗೂ ವೈರಸ್ ರೋಗಗಳ (ಬ್ರುಸೆಲ್ಲಾ, ನೀಲಿ ನಾಲಿಗೆ ರೋಗ ಮತ್ತು ರೇಬಿಸ್) ವಿರುದ್ಧ ಲಸಿಕೆ ತಯಾರಿಸಲು ಉಪಯುಕ್ತವಾಗಲಿದೆ. ಹಾಗಾಗಿ ಜಾನುವಾರುಗಳ ಆರೋಗ್ಯ ಮತ್ತು ರೈತರ ಆರ್ಥಿಕ ಸ್ಥಿತಿ ಸುಧಾರಿಸಲು ಅನುವಾಗಲಿದೆ ಮತ್ತು ಪರೋಕ್ಷವಾಗಿ ಪ್ರಾಣಿಜನ್ಯ ರೋಗಗಳ ಮಾನವರಿಗೆ ಹರಡದಂತೆ ತಡೆಗಟ್ಟಲು ಸಾಧ್ಯವಾಗುತ್ತದೆ.

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಲಸಿಕೆ ಅಭಿವೃದ್ಧಿ, ತಯಾರಿಕೆ, ಸರಬರಾಜು ಮತ್ತು ರೋಗ ತಪಾಸಣಾ ಕ್ಷೇತ್ರದಲ್ಲೇ ಒಂದು ಅತ್ಯುತ್ತಮವಾದ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯು ಸ್ವಾತಂತ್ರ ಪೂರ್ವದಲ್ಲಿ ಸ್ಥಾಪಿಸಲಾದ ಮೊದಲನೇ ಪ್ರಾಣಿ ಲಸಿಕಾ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುತ್ತದೆ. ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ಮಹಾವಿದ್ಯಾಲಯ, ಬೀದರ್ ಗೆ ದಿ:01.04.2006 ರಲ್ಲಿ ಈ ಸಂಸ್ಥೆಯನ್ನು ವರ್ಗಾಯಿಸಲಾಯಿತು.

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಮೂಲ ಉದ್ದೇಶಗಳು :–

1. ರೋಗ ನಿಯಂತ್ರಣಕ್ಕಾಗಿ ಜಾನುವಾರು, ಕುಕ್ಕುಟಗಳ ಲಸಿಕೆಗಳು ಮತ್ತು ತಪಾಸಣಾ ಆ್ಯಂಟಿಜನ್‌ಗಳ ತಯಾರಿಕೆ.
2. ವಿವಿಧ ಜಾನುವಾರು ಹಾಗೂ ಕೋಳಿಗಳಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ರೋಗಗಳ ತಪಾಸಣೆ.
3. ನವೀನ ರೋಗ ಲಸಿಕೆ ಮತ್ತು ಆ್ಯಂಟಿಜನ್‌ಗಳ ಸಂಶೋದನೆ ಹಾಗೂ ರೋಗ ತಪಾಸಣೆಗಾಗಿ ಹೊಸ ತಂತ್ರಜ್ಞಾನದ ಅಳವಡಿಕೆ.

ಸಂಶೋಧನೆ, ತರಬೇತಿ ಹಾಗೂ ವಿಸ್ತರಣೆ :–

1. ವಿಜ್ಞಾನಿಗಳು ಹಾಗೂ ತಂತ್ರಜ್ಞರಿಗೆ ಲಸಿಕೆ ಬಳಸುವ ವಿಧಾನ ಹಾಗೂ ರೋಗ ತಪಾಸಣೆಯ ಬಗ್ಗೆ ತರಬೇತಿ.
2. ರೈತರಿಗೆ, ಪಶು ಸಂಗೋಪನೆ ಹಾಗೂ ಜಾನುವಾರು ಆರೋಗ್ಯದ ಬಗ್ಗೆ ಮಾಹಿತಿ ಮತ್ತು ತರಬೇತಿ.

3. ಸಂಸ್ಥೆಯ ದಕ್ಷಿಣ ಪ್ರಾಂತೀಯ ಪಶು ರೋಗ ತನಿಖಾ ಪ್ರಯೋಗಾಲಯವಾಗಿಯೂ ಕಾರ್ಯನಿರ್ವಹಿಸುತ್ತಿದೆ.

ಜಾನುವಾರು ಹಾಗೂ ಕುಕ್ಕುಟಗಳಲ್ಲಿ ಕಂಡುಬರುವ ರೋಗಗಳನ್ನು ತಡೆಗಟ್ಟಲು ಬೇಕಾದ ಪ್ರಮುಖ ಪಶು ಜೈವಿಕಗಳ ಉತ್ಪಾದನೆ, ಪೂರೈಕೆ ಹಾಗೂ ರೋಗೋದ್ರೇಕ ಸಮಯದಲ್ಲಿ ರೋಗ ನಿರ್ಣಯ ಮಾಡಿ, ರೋಗ ನಿಯಂತ್ರಣ ಮತ್ತು ಹತೋಟಿಕ್ರಮಗಳನ್ನು ನಿರ್ವಹಿಸಲು ಪಶುವೈದ್ಯ ಇಲಾಖಾ ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡುವುದು, ಪೂರ್ಣ ಪ್ರಮಾಣದಲ್ಲಿ ಆರೋಗ್ಯ ಖಚಿತ ಪಡಿಸಿಕೊಳ್ಳುವುದು, ಇವು ಸಂಸ್ಥೆಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ. ಸಂಸ್ಥೆಯು ಪ್ರಮುಖವಾದ ಬ್ಯಾಕ್ಟೀರಿಯಾ ಲಸಿಕೆಗಳಾದ ಗಳಲೆ ರೋಗ, ಚಪ್ಪೆ ರೋಗ, ನರಡಿ ರೋಗ, ಕರುಳು ಬೇನೆ ಲಸಿಕೆ ಹಾಗೂ ವೈರಾಣು ಲಸಿಕೆಗಳಾದ ರೇಬೀಸ್, ಪಿ.ಪಿ.ಆರ್., ಕುರಿ ಸಿಡುಬು, ರಾಣಿಖೇತ್ ರೋಗಗಳ ಲಸಿಕೆಗಳನ್ನು ತಯಾರಿಸುತ್ತಿದೆ. ವರ್ಷದಲ್ಲಿ ಸುಮಾರು 6–7 ಕೋಟಿ ಡೋಸ್‌ಗಳ ಲಸಿಕೆ ಉತ್ಪಾದಿಸಿ ಪಶುಸಂಗೋಪನಾ ಇಲಾಖೆಯ ಮೂಲಕ ರೈತರಿಗೆ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ. ಸಂಸ್ಥೆಯು ತಯಾರಿಸುವ ಪ್ರಾಣಿ ಲಸಿಕೆಗಳು, ಪ್ರಾಣಿಗಳ ಆರೋಗ್ಯ ಮತ್ತು ಉತ್ಪಾದನಾ ಸಾಮರ್ಥ್ಯ ಹೆಚ್ಚುಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಸಂಸ್ಥೆಯು ರೈತರಿಗೆ ಮತ್ತು ರಾಜ್ಯದ ಪಶುವೈದ್ಯರಿಗೆ ರೋಗ ನಿರ್ಣಯದ ಸೌಲಭ್ಯಗಳನ್ನು ಕೇಂದ್ರೀಯ ಪ್ರಯೋಗಾಲಯ, ಬೆಂಗಳೂರು ಮತ್ತು 12 ಪ್ರಾದೇಶಿಕ ರೋಗ ನಿರ್ಣಯ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರಗಳ ಸಹಯೋಗದೊಂದಿಗೆ ನಿರ್ವಹಿಸುತ್ತಿದ್ದು, ಜೊತೆಗೆ, ವನ್ಯ ಜೀವಿಗಳ ರೋಗ ನಿರ್ಣಯ ಮಾಡಲು ಪ್ರಯೋಗಾಲಯವನ್ನು ಪ್ರತ್ಯೇಕವಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸ್ಥಾಪಿಸಿದೆ. ಈ ಪ್ರಯೋಗಾಲಯಗಳು ಲಸಿಕೆ ವಿತರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಹಾಗೂ ರೈತರ ಮನೆ ಬಾಗಿಲಿಗೆ ಹೋಗಿ ರೋಗ ನಿರ್ಣಯ ಸೌಕರ್ಯವನ್ನು ಒದಗಿಸುವ ಮೂಲಕ ರೋಗ ಹರಡುವಿಕೆಯನ್ನು ನಿಯಂತ್ರಿಸುವಲ್ಲಿ ರಾಜ್ಯ ಪಶುಸಂಗೋಪನಾ ಇಲಾಖೆಯನ್ನು ಬೆಂಬಲಿಸುತ್ತಿವೆ.. ಇದರ ಜೊತೆಗೆ ಸಂಸ್ಥೆಯಲ್ಲಿ ಭಾರತ ಸರ್ಕಾರದ ಯೋಜನೆಯಾದ ದಕ್ಷಿಣ ಪ್ರಾಂತೀಯ ರೋಗ ತಪಾಸಣಾ ಕೇಂದ್ರವು ರೆಫರಲ್ ಪ್ರಯೋಗಾಲಯವಾಗಿ ಕಾರ್ಯನಿರ್ವಹಿಸುತ್ತಿದೆ.

ಸಂಸ್ಥೆಯು ಜಾನುವಾರು ಮತ್ತು ಕೋಳಿಗಳ ವೈರಾಣು ಲಸಿಕೆಗಳ ಉತ್ಪಾದನೆಗೆ ಮತ್ತು ಜಾನುವಾರುಗಳ ಬ್ಯಾಕ್ಟೀರಿಯಾ ಲಸಿಕೆಗಳ ತಯಾರಿಕೆಗಾಗಿ ಹೊಸ ಜಿ.ಎಮ್.ಪಿ. ಸೌಲಭ್ಯವನ್ನು ಸೃಷ್ಟಿಸಿದೆ. ಉಪಕರಣಗಳ ಮತ್ತು ಯಾಂತ್ರೀಕೃತಗೊಂಡ ಉತ್ಪನ್ನ ಸೌಲಭ್ಯವನ್ನು ಬಲಪಡಿಸುತ್ತಿರುವುದರಿಂದ, ಸಂಸ್ಥೆಯು ಕಳೆದ ವರ್ಷ 280 ಲಕ್ಷಕ್ಕೂ ಹೆಚ್ಚು ಕರುಳು ಬೇನೆ ಲಸಿಕೆಯನ್ನು ಸರಬರಾಜು ಮಾಡಿ ಎರಡು ಬಾರಿ ಕುರಿ, ಮೇಕೆಗಳಲ್ಲಿ ಶೇಕಡಾ 100 ರಷ್ಟು ವ್ಯಾಪ್ತಿ ಹಾಗೂ ಪಿ.ಪಿ.ಆರ್. ರೋಗ ರಕ್ಷಣೆಗಾಗಿ ಶೇ.100 ರಷ್ಟು ಲಸಿಕೆ ಒದಗಿಸಲಾಗಿತ್ತು.

ಎಸ್‌ಎಂ/ಕೆಎಂ

**13ನೇ ಕೃಷಿ ವಿಜ್ಞಾನ ಕಾಂಗ್ರೇಸ್**
**(ಫೆಬ್ರವರಿ 21– 24, 2017)**

## ವೈಜ್ಞಾನಿಕ ಕಾರ್ಯಕ್ರಮ

### ಎರಡನೇ ದಿನ : ಬುಧವಾರ, ಫೆಬ್ರವರಿ 22, 2017

| | |
|---|---|
| 09–00 ರಿಂದ 11–00 ಬೆಳಿಗ್ಗೆ | **ಪ್ಲೆನರಿ ಸಮಾವೇಶ–2**<br>**ಸ್ಥಳ:** ಡಾ॥ ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಸಭಾಂಗಣ<br><br>**ಶೀರ್ಷಿಕೆ:** ಗ್ರಾಮೀಣ ಅಭಿವೃದ್ಧಿಗಾಗಿ ತಾಂತ್ರಿಕ ಜ್ಞಾನ ಆದಾರಿತ ಮಾರ್ಗೋಪಾಯಗಳು<br>**ಭಾಷಣಕಾರರು:** ಡಾ॥ ಅನಿಲ್ ಕಾಕೋಡ್ಕರ್, ಮಾಜಿ ಚೇರ್‌ಮೆನ್, ಅಣು ಶಕ್ತಿ ವಿಜ್ಞಾನ ಆಯೋಗ, ಮುಂಬಯಿ,<br><br>**ಶೀರ್ಷಿಕೆ:** ಹವಾಮಾನ ಬದಲಾವಣೆ, ಪರಿಸರಪದ್ಧತಿ ಮತ್ತು ಕೃಷಿ<br>**ಭಾಷಣಕಾರರು:** ಡಾ॥ ಕಮಲ್‌ಜಿತ್ .ಎಸ್. ಬಾವ, ಪ್ರಾಧ್ಯಾಪಕರು, ಜೀವಶಾಸ್ತ್ರ ವಿಭಾಗ, ಮಾಸಾಸುಚೆಸ್ಟ್ ವಿಶ್ವವಿದ್ಯಾನಿಲಯ, ಬೋಸ್ಟನ್, ಅಮೇರಿಕಾ.<br><br>**ಶೀರ್ಷಿಕೆ:** ಕೈಗೆಟುಕುವ ದರದಲ್ಲಿ ಚತುರ ಆಹಾರ<br>**ಭಾಷಣಕಾರರು:** ಡಾ॥ ವಿ.ಪ್ರಕಾಶ್, ಉಪಾಧ್ಯಕ್ಷರು, ಐ.ಯು.ಎನ್.ಎಸ್ ಮತ್ತು ಮಾಜಿ ನಿರ್ದೇಶಕರು, ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಸಿ.ಎಫ್.ಟಿ.ಆರ್.ಐ), ಮೈಸೂರು |

| ತಾಂತ್ರಿಕ ಸಮಾವೇಶ–2 (ಏಕ ಕಾಲದಲ್ಲಿ) | | | |
|---|---|---|---|
| ಬೆಳಿಗ್ಗೆ 11–30 ರಿಂದ 01–00 ಮಧ್ಯಾಹ್ನ | ಅಂತರ ರಾಷ್ಟ್ರೀಯ ಸಮಾವೇಶ ಸಭಾಂಗಣ | ಕುವೆಂಪು ಸಭಾಂಗಣ | ನಾರ್ತ್ ಬ್ಲಾಕ್ ಸಭಾಂಗಣ |
| | **ವಿಷಯ:** ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವುದು | ಹವಾಮಾನ ಬದಲಾವಣೆ ಬಗ್ಗೆ ಮಾನವನ ಸಂಪನ್ಮೂಲದ ಸಾಮರ್ಥ್ಯ ವೃದ್ಧಿಸುವುದು | ಹವಾಮಾನ ವೈಪರಿತ್ಯ ಮತ್ತು ಬದಲಾವಣೆ |
| 03–30 ರಿಂದ 04–30 ಮಧ್ಯಾಹ್ನ | **ಪೋಸ್ಟರ್ ಸಮಾವೇಶ–2**<br>**ಸ್ಥಳ:** ಡಾ॥ ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಸಭಾಂಗಣ | | |
| 04–30 ರಿಂದ 06–00 ಮಧ್ಯಾಹ್ನ | **ಪ್ಯಾನೆಲ್ ಚರ್ಚೆ–1**<br>**ವಿಷಯ:** ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವುದು ಮತ್ತು ಉಪಶಮನ<br>**ಸ್ಥಳ:** ಡಾ॥ ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಸಭಾಂಗಣ | | |
| 06–00 ರಿಂದ 7–30 ಸಂಜೆ | ಸಾಂಸ್ಕೃತಿಕ ಕಾರ್ಯಕ್ರಮ<br>**ಸ್ಥಳ:** ಡಾ॥ ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಸಭಾಂಗಣ | | |
| **ಉಪ ಸಭೆಗಳು** | | | |
| ಬೆಳಿಗ್ಗೆ 11–30 01–00 ಮಧ್ಯಾಹ್ನ | **ಉಪ ಸಭೆ –1**<br>**ಶೀರ್ಷಿಕೆ:** ಪರಾಗ ಸ್ಪರ್ಶಿಗಳು ಮತ್ತು ಹವಾಮಾನ ಬದಲಾವಣೆ<br>**ಸ್ಥಳ:** ಡಾ॥ ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಸಭಾಂಗಣ | | |

| | |
|---|---|
| | ಕೊಠಡಿ ಸಂಖ್ಯೆ–1 (ನೆಲ ಮಹಡಿ) |
| 02–00<br>ರಿಂದ<br>04–30<br>ಮಧ್ಯಾಹ್ನ | **ಉಪ ಸಭೆ –2**<br><br>**ಶೀರ್ಷಿಕೆ:** ಪ್ಯಾರಿಸ್ ಒಪ್ಪಂದ ಮತ್ತು ಭಾರತೀಯ ಕೃಷಿ<br><br>**ಸ್ಥಳ:** ಡಾ॥ ಬಾಬು ರಾಜೇಂದ್ರ ಪ್ರಸಾದ್ ಅಂತರ ರಾಷ್ಟ್ರೀಯ ಸಮಾವೇಶ ಸಭಾಂಗಣ ಕೊಠಡಿ ಸಂಖ್ಯೆ–2 (ಮೊದಲನೆ ಮಹಡಿ) |

| | |
|---|---|
| ಬೆಳಿಗ್ಗೆ<br>10–00<br>ರಿಂದ<br>01–00<br>ಮಧ್ಯಾಹ್ನ | ವಿಧ್ಯಾರ್ಥಿಗಳ ಆಶುಭಾಷಣ ಸ್ಪರ್ಧೆ<br><br>**ಸ್ಥಳ:** ನಾರ್ತ್ ಬ್ಲಾಕ್ ಸಭಾಂಗಣ |